ಕ್ಷೇತ್ರದಲ್ಲಿಯೂ ಇದೆ. ಇವತ್ತು ನಗರಾಭಿವೃದ್ಧಿ ಮಂತ್ರಿಗಳು, ರೈತರು ತೊಂದರೆ ಕೊಡುತ್ತಿದ್ದಾರೆ ಎನ್ನತಕ್ಕಂಥ ಈ ಒಂದು ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಮೊದಲು ರಾಮನಗರ ಮತ್ತು ಮಾಗಡಿ ಎರಡು ಸೇರಿ...

ಅಧ್ಯಕ್ಷರು : ಅದಕ್ಕೆ ಬೇರೆ ನೋಟೀಸನ್ನು ಕೊಡಬೇಕು, ನಾನು ನೆಲಮಂಗಲದ್ದು ಕೇಳುತ್ತಿರೇನೋ ಎಂದು....

ಶ್ರೀ ಹೆಚ್.ಸಿ. ಬಾಲಕೃಷ್ಣ : ನನ್ನ ಕ್ಷೇತ್ರದ್ದು ಸ್ವಲ್ಪ ಕುಡಿಯುವ ನೀರಿನ ಸಮಸ್ಯೆ ಇದೆ.

ಅಧ್ಯಕ್ಷರು : ಮಾಡುತ್ತಾರೆ ಬಿಡಿ. ನಿಮ್ಮ ಕ್ಷೇತ್ರಕ್ಕೆ ಕುಡಿಯುವ ನೀರಿಗೇನು ಸಮಸ್ಯೆ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಲ್ಲಿ ಕೂಡ ಪೈಪಗಳನ್ನೇಲ್ಲಾ ತಂದು ಹಾಕಿದ್ದಾರೆ, ಆದರೆ, ಇದರ ಬಗ್ಗೆ ಏನೂ ಕ್ರಮವನ್ನು ತೆಗದುಕೊಂಡಿಲ್ಲ.

ಕಡೂರು ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಲ್ಲಿ ಮಂಜೂರಾದ ಮನೆಗಳ ಸಂಖ್ಯೆ

341 - ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕಿನಲ್ಲಿ 1994-95ನೇ ಸಾಲಿಗೆ ಆಶ್ರಯ ಯೋಜನೆ ಅಡಿ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು ;

ಆ) ಇದುವರೆಗೂ ನಿರ್ಮಾಣವಾದ ಮನೆಗಳಿಗೆ ಹಣ ಬಿಡುಗಡೆ ಆಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಕಾರಣವೇನು, ಹಾಗೂ ಯಾವಾಗ ಹಣ ಬಿಡುಗಡೆ ಮಾಡಲಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) 600 ಮನೆಗಳು.

ಆ) 1995-96ನೇ ಸಾಲಿನಲ್ಲಿ ರೂ. 9.93 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ತರುವಾಯ ಸರ್ಕಾರ ದಿನಾಂಕ: 18-8-95 ರಂದು ಚಿಕ್ಕಮಗಳೂರು ಜಿಲ್ಲೆಗೆ ರೂ. 50.00 ಲಕ್ಷಗಳನ್ನು ಬಿಡುಗಡೆ ಮಾಡಿದೆ. (ಸರ್ಕಾರಿ ಆದೇಶ ಸಂ. ವನಇ 1 ಹೆಚ್ ಎಹೆಚ್(2) 95)

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಎಂ. ಕೃಷ್ಣಮೂರ್ತಿ : 94-95ನೇ ಸಾಲಿಗೆ ಸಂಬಂಧಪಟ್ಟಂತೆ 600 ಮನೆಗಳಿಗೆ ಇದುವರೆಗೂ ಹಣ ಬಿಡುಗಡೆ ಆಗಿಲ್ಲ. ಆದರೆ ಉತ್ತರದಲ್ಲಿ 95-96ನೇ ಸಾಲಿಗೆ 9 ಲಕ್ಷ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. 94-95ನೇ ಸಾಲಿನಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ಎಂಬುದನ್ನು ನಿರ್ದಿಷ್ಟವಾಗಿ ಮಾನ್ಯ ಸಚಿವರು ಹೇಳಬೇಕು.

ಶ್ರೀ ಬಸವರಾಜ ರಾಯರೆಡ್ಡಿ : 94-95ನೇ ಸಾಲಿನಲ್ಲಿ 600 ಮನೆಗಳನ್ನು ಕಡೂರು ತಾಲ್ಲೂಕಿಗೆ ಮಂಜೂರು ಮಾಡಲಾಗಿದೆ. ಉತ್ತರ ಕೊಟ್ಟಿರುವುದರಲ್ಲಿ ಸ್ವಲ್ಪ ತಪ್ಪಾಗಿದೆ. ಮೊದಲನೆಯದು 94-95 ಎಂದು ಇರಬೇಕು ಅನಂತರ 95-96ನೇ ಸಾಲು ಎಂದು ಇರಬೇಕಾಗಿತ್ತು. ಇದು ಟೈಪಿಂಗ್ ಮಿಸ್ಟೇಕ್. 94-95ನೇ ಸಾಲಿನಲ್ಲಿ 9.93 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ. 600 ಮನೆಗಳ ಈಗಾಗಲೇ ಪೈಕಿ 44 ಮನೆಗಳನ್ನು ಪೂರ್ತಿಗೊಳಿಸಲಾಗಿದೆ. 250 ಮನೆಗಳು ವಿವಿಧ ಹಂತದಲ್ಲಿವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : 94-95ನೇ ಸಾಲಿನದು ಈಗಾಗಲೇ ಒಂದು ವರ್ಷ ಕಳೆದಿದ್ದರೂ ಇನ್ನೂ ಏತಕ್ಕೆ ತಡಮಾಡುತ್ತಿದ್ದೀರಿ? ಮುಂದೆ ಮಾಡುವಂಥ ಕಾರ್ಯಕ್ರಮದಲ್ಲಿ ಈ ವರ್ಷವೇ ಫಲಾನುಭವಿಗಳಿಗೆ ಕೊಟ್ಟರೆ ಒಳ್ಳೆಯದು. ಏಕೆಂದರೆ ನೀವು ಹಣವನ್ನು ಕೊಡದೇ ಹೋದರೆ, ಅವರು ಕಟ್ಟಿರತಕ್ಕ ಮನೆಗಳು ಏನು ಅರ್ಧಂಬರ್ಧವಾಗಿವೆ ಇದಕ್ಕೆ ಮಳೆ ಬಂದಾಗ ಆ ಅರ್ಧ ಕಟ್ಟಿರುವ ಕಟ್ಟಡಗಳೂ ಪೂರ್ತಿ ಹಾಳಾಗಿ ಹೋಗುತ್ತವೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಈ ರಾಜ್ಯದಲ್ಲಿ 94-95ನೇ ಸಾಲಿನಲ್ಲಿ 1.50 ಲಕ್ಷ ಮನೆಗಳನ್ನು ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಬೇಕೆಂದು ಸೆಪ್ಟೆಂಬರ್ ತಿಂಗಳಲ್ಲಿ ಹಿಂದಿನ ಸರ್ಕಾರ ಆಜ್ಞೆ ಹೊರಡಿಸಿತು. 15 ಸಾವಿರ ರೂ.ಗಳಿಗೆ ಒಂದರಂತೆ ಮನೆಗಳನ್ನು ಪೂರ್ತಿಗೊಳಿಸಬೇಕಾದರೆ 225 ಕೋಟಿ ರೂ. ಬೇಕಾಗುತ್ತದೆ. ಆದರೆ ಅಂದಿನ ಸರ್ಕಾರ ಬಿಡುಗಡೆ ಮಾಡಿದ ಹಣ ಕೇವಲ 15.78 ಕೋಟಿ ರೂ. ಇದರ ಜೊತೆಗೆ ಅವರು ಬಜೆಟನಲ್ಲಿ ಕೂಡ ಪ್ರಾವಿಷನ್ ಮಾಡಿಲ್ಲ. ಅದು ಒಂದು ಪೇಪರ್ ಆರ್ಡರ್ ಹೀಗಾಗಿ 94-95ನೇ ಸಾಲಿನಲ್ಲಿ ಏನು ಆಶ್ರಯ ಯೋಜನೆಯಡಿಯಲ್ಲಿ ಹಿಂದಿನ ಸರ್ಕಾರ ಮನೆಗಳನ್ನು ಮಂಜೂರು ಮಾಡಿತ್ತು. ಅದಕ್ಕೆ ಹಣಕಾಸನ್ನು ಬಿಡುಗಡೆ ಮಾಡದೇ ಹೋದುದರಿಂದ, ಆ ಕೆಲಸ ಕುಂಠಿತ ಆಗಿದೆ. ಆದಾಗ್ಯೂ ಹಿಂದಿನ ವರ್ಷದ ಮನೆಗಳನ್ನು ಪೂರ್ತಿಗೊಳಿಸುವ ಸಲುವಾಗಿ ಈಗಾಗಲೇ 18-8-95 ರಂದು ಒಂದು ಸರ್ಕಾರೀ ಆಜ್ಞೆಯನ್ನು ಹೊರಡಿಸಿದೆ. ಅದನ್ನು ಜಿಲ್ಲಾ ಪಂಚಾಯಿತಿಗೆ ನಾವು ಕಳುಹಿಸಿದ್ದೇವೆ. ಪಂಚಾಯಿತ್ ರಾಜ್ ಆಕ್ಟ್ ಪ್ರಕಾರ ಜಿಲ್ಲಾ ಪಂಚಾಯಿತಿಯವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : 95-96ನೇ ಸಾಲಿಗೆ ಸಚಿವರು ನಮ್ಮ ಕಡೂರು ತಾಲ್ಲೂಕಿಗೆ ಎಷ್ಟು ಮನೆಗಳನ್ನು ಮಂಜೂರು ಮಾಡಿದ್ದಾರೆಂಬ ಅಂಕಿ ಅಂಶವನ್ನು ಹೇಳುತ್ತೀರಾ?

ಶ್ರೀ ಬಸವರಾಜ ರಾಯರೆಡ್ಡಿ : 95-96ನೇ ಸಾಲಿನಲ್ಲಿ ನಾವು ತಾಲ್ಲೂಕುವಾರು ಮನೆಗಳನ್ನು ಕೊಡುವುದಿಲ್ಲ. ಕರ್ನಾಟಕ ಪಂಚಾಯತ್ ರಾಜ್ ಆಕ್ಟ ಪ್ರಕಾರ ಜಿಲ್ಲಾ ಪಂಚಾಯ್ತಿಗೆ ನಾವು ಮನೆಗಳನ್ನು ಮಂಜೂರು ಮಾಡಿಕೊಡುತ್ತೇವೆ. ಚಿಕ್ಕಮಗಳೂರು ಜಿಲ್ಲೆಗೆ 1698 ಮನೆಗಳನ್ನು ಗ್ರಾಮೀಣ ಪ್ರದೇಶದಲ್ಲಿ, 385 ಮನೆಗಳನ್ನು ಪಟ್ಟಣಪ್ರದೇಶದಲ್ಲಿ ಅಂದರೆ ಒಟ್ಟು 2083 ಮನೆಗಳನ್ನು ಮಂಜೂರು ಮಾಡಿದ್ದೇವೆ.

ಶ್ರೀ ಸಿ. ಆರ್. ಸಗೀರ್ ಅಹ್ಮದ್ : ಕಡೂರು ಕ್ಷೇತ್ರಕ್ಕೆ ಸೀಮಿತವಾದುದು 94-95ನೇ ಸಾಲಿನಲ್ಲಿ 9.93 ಲಕ್ಷ ರೂ. ಬಿಡುಗಡೆ ಆಗಿರುವುದಾಗಿ ಮಂತ್ರಿಗಳು ಹೇಳಿದ್ದಾರೆ. 18-8-95ರಲ್ಲಿ 50 ಲಕ್ಷರೂ.

ಬಿಡುಗಡೆ ಮಾಡಿರುವುದಾಗಿ ಹೇಳಿದ್ದಾರೆ. ಆದರೆ 95-96ನೇ ಸಾಲಿನಲ್ಲಿ ಈ ಜಿಲ್ಲೆಯಲ್ಲಿ 1698 ಮನೆಗಳನ್ನು ನಿರ್ಮಿಸುವ ಯೋಜನೆ ಹಮ್ಮಿಕೊಂಡಿದ್ದರೆ, ಹಿಂದಿನ ಸಾಲಿನಲ್ಲಿ ಎಷ್ಟು ಮನೆಗಳು ಆಗಿತ್ತು? ಈ ಮನೆಗಳನ್ನು ಪೂರ್ಣಗೊಳಿಸುವುದಕ್ಕೆ ಇನ್ನೂ ಎಷ್ಟು ಹಣ ಬೇಕು ಎಂಬುದನ್ನು ಹೇಳಬೇಕು.

ಎರಡನೆಯದಾಗಿ 94-95ನೇ ಸಾಲಿನಲ್ಲಿ ಹಿಂದಿನ ಸರ್ಕಾರ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದ ಸಂದರ್ಭದಲ್ಲಿ ಹುಡ್ಕೋ ಇಲಾಖೆಯಿಂದ ಇವರು ಸಾಲದ ರೂಪದಲ್ಲಿ ಎಷ್ಟು ಹಣವನ್ನು ಪಡೆದುಕೊಂಡಿದ್ದಾರೆಂಬುದನ್ನು ಹೇಳಬೇಕು.

ಅಧ್ಯಕ್ಷರು : 225 ಕೋಟಿ ರೂ.ಗಳ ಪೈಕಿ 15 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು, ನೀವೇ ಮಂತ್ರಿಯಾಗಿದ್ದವರು ಈಗ ಈ ಪ್ರಶ್ನೆಯನ್ನು ಕೇಳಿದರೆ ಅವರು ಏನು ಉತ್ತರ ಹೇಳಬೇಕು?

ಶ್ರೀ ಬಸವರಾಜ ರಾಯರೆಡ್ಡಿ : ಕೆಲವು ವಿಚಾರಗಳನ್ನು ಇಲ್ಲಿ ನಾನು ಹೇಳಬಲ್ಲೆ. ಈ ವರ್ಷ ನಾವು 50 ಲಕ್ಷ ರೂ.ಗಳನ್ನು ಏನು ಬಿಡುಗಡೆ ಮಾಡಿದ್ದೇವೆ ಅದನ್ನು ಕೇವಲ ಕಡೂರು ತಾಲ್ಲೂಕಿಗೆ ಬಿಡುಗಡೆ ಮಾಡಿಲ್ಲ. ನಾವು ಜಿಲ್ಲಾ ಪಂಚಾಯ್ತಿಗೆ ಬಿಡುಗಡೆ ಮಾಡುತ್ತೇವೆ. ಜಿಲ್ಲಾ ಪಂಚಾಯಿತಿಯವರು ಅನಂತರ ಅದನ್ನು ತಾಲ್ಲೂಕು ಪಂಚಾಯಿತಿಗೆ ಬಿಡುಗಡೆ ಮಾಡುತ್ತಾರೆ. ಹುಡ್ಕೋದಿಂದ ಎಷ್ಟು ಹಣವನ್ನು ತೆಗೆದುಕೊಂಡಿದ್ದೀರೆಂಬುದು ತಾವು ಬೇರೆ ಪ್ರಶ್ನೆಯನ್ನು ಕೇಳಿದರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೇ, ಆಶ್ರಯ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಮನೆಗಳನ್ನು ಕಟ್ಟಿಸಿದ್ದೀರಿ? ಈಗ ಆಶ್ರಯ ಮನೆಗಳನ್ನು ಕಟ್ಟುವ ವ್ಯವಸ್ಥೆಯನ್ನು ನಿಮ್ಮ ಸರ್ವೆ ಕೆಲಸ ಮುಗಿದ ಮೇಲೆ ತರುತ್ತೀರೋ? ಹಾಗೂ ಸರ್ವೆ ಕೆಲಸ ಮುಗಿದಮೇಲೆ ಅವರಿಗೆ ಅಲಾಟಮೆಂಟ್ ಕೊಡುತ್ತೀರೋ?

ಶ್ರೀ ಬಸವರಾಜ ರಾಯರೆಡ್ಡಿ : 95-96ನೇ ಸಾಲಿನಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ ನಾವು ಒಟ್ಟು 60 ಸಾವಿರ ಮನೆಗಳನ್ನು ತೆಗೆದುಕೊಳ್ಳುವುದಕ್ಕೆ ನಿರ್ಧಾರ ಮಾಡಿದ್ದೇವೆ, ಮತ್ತು ಜಿಲ್ಲಾವಾರು ಆಜ್ಞೆಯನ್ನೂ ಕೂಡ ಹೊರಡಿಸಿದ್ದೇವೆ. ಈಗಾಗಲೇ ಸರ್ವೆ ಕೆಲಸ ಆಗಿದೆ. ಪಂಚಾಯತ್ ರಾಜ್ ಆಕ್ಟ ಪ್ರಕಾರ ಗ್ರಾಮಸಭೆಗಳು ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಸರ್ವೆ ಮಾಡುವ ಸಂದರ್ಭದಲ್ಲಿ ಆಯಾಯ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಮತ್ತು ಸದಸ್ಯರುಗಳು ಸೇರಿ ಗ್ರಾಮ ಸಭೆಗಳನ್ನು ಮಾಡಿ, ಫಲಾನುಭವಿಗಳನ್ನು ಈಗಾಗಲೇ ಅವರು ಆಯ್ಕೆ ಮಾಡಿದ್ದಾರೆ. ಅದರ ಪ್ರಕಾರ ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯಿತಿಗಳು ಯಾರ್ಯಾರಿಗೆ ಮನೆಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿವೆ.

ಶ್ರೀ ಹೆಚ್. ಶಿವಪ್ಪ : ಈಗ ತಾನೇ ಮಾನ್ಯ ಮಂತ್ರಿಗಳು ಹೇಳಿದರು, ಜಿಲ್ಲಾ ಪರಿಷತ್ ಮುಖಾಂತರ ಫಲಾನುಭವಿಗಳಿಗೆ ಆಶ್ರಯ ಮನೆಗಳನ್ನು ಅಲಾಟಮೆಂಟ್ ಮಾಡುತ್ತೇವೆ ಎಂದು. ಯಾವ ರೀತಿ ಅಲಾಟಮೆಂಟ್ ಮಾಡಬೇಕೆಂಬ ಬಗ್ಗೆ ನಾರಂಸನ್ನು ಏನಾದರೂ ಮಾಡಿಕೊಂಡಿದ್ದೀರೋ?

ಎರಡನೆಯದಾಗಿ ಈಗಾಗಲೇ ಹಿಂದಿನ ಸರ್ಕಾರದವರು ಆಶ್ರಯ ಯೋಜನೆ ಅಡಿಯಲ್ಲಿ 1.50 ಲಕ್ಷ ಮನೆಗಳನ್ನು ಕೊಡುವುದಕ್ಕೆ ಫಲಾನುಭವಿಗಳನ್ನು ಗುರ್ತಿಸಿದ್ದರು ಎಂದು ಹೇಳಿದರು. ಈ ಎಲ್ಲಾ ಮನೆಗಳಿಗೂ ಹಣವನ್ನೊದಗಿಸುವ ಪ್ರಯತ್ನವನ್ನು ನೀವು ಮಾಡುತ್ತೀದ್ದೀರಾ?

ಇನ್ನು ಮೂರನೆದಯದಾಗಿ, ಆಶ್ರಯ ಯೋಜನೆಯ ಫಲಾನುಭವಿಗಳನ್ನು ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಗುರ್ತಿಸಿ ತಾಲ್ಲೂಕು ಪಂಚಾಯಿತಿ ಮುಖಾಂತರ ಹಂಚಬೇಕೆಂದು ತಾವು ತಿಳಿಸಿದಿರಿ. ನಗರ ಮತ್ತು ಪಟ್ಟಣಗಳಲ್ಲಿ ಯಾವ ರೀತಿ ಈ ಮನೆಗಳನ್ನು ಹಂಚಬೇಕೆಂದು ಒಂದು ಸಮಿತಿಯನ್ನೇನಾದರೂ ಮಾಡುತ್ತೀರಾ? ಇದರ ಬಗ್ಗೆ ವಿವರಣೆ ಕೊಡಬೇಕು.

ಶ್ರೀ ಬಸವರಾಜ ರಾಯರೆಡ್ಡಿ : ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಕರ್ನಾಟಕ ಪಂಚಾಯತ್ ರಾಜ್ ಆಕ್ಟ 93ರ ಪ್ರಕಾರ, ನಿವೇಶನ ಕೊಡುವ ವಿಚಾರವಾಗಲಿ, ಮನೆಯನ್ನು ಕೊಡುವ ವಿಚಾರವಾಗಲಿ, ಸೆಕ್ಷನ್, 3, 45 ಮತ್ತು 148ರ ಪ್ರಕಾರ ಈ ಕೆಲಸವನ್ನು ಗ್ರಾಮ ಸಭೆಗಳೇ ಮಾಡಬೇಕು. ಅವರೇ ಇದನ್ನು ಮಾಡಬೇಕಾಗಿರುವುದರಿಂದ ಇದನ್ನು ನಾವು ಗ್ರಾಮ ಪಂಚಾಯಿತಿಗಳಿಗೆ ಕೊಡುತ್ತಾರೆ. ಈಗ ಫಲಾನುಭವಿಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಅರ್ಹ ಫಲಾನುಭವಿಗಳು ಎಷ್ಟು ಜನರಿದ್ದಾರೆ ಅವರನ್ನು ಲಾಟರಿ ಮೂಲಕ ತೆಗೆದುಕೊಳ್ಳಬೇಕೆಂದು ತೀ ರ್ಮಾನಿಸಿದ್ದೇವೆ. ಇದಕ್ಕೆ ಕಾರಣ ಇಷ್ಟೆ. ಒಂದು ಊರಿನಲ್ಲಿ 600 ಜನ ಅರ್ಹ ಫಲಾನುಭವಿಗಳು ಆಯ್ಕೆಯಾಗಿರುತ್ತಾರೆ. ಆದರೆ ಆ ಊರಿನಲ್ಲಿ 100 ನಿವೇಶನ ಅಥವಾ ಮನೆಗಳನ್ನು ಕೊಡಬೇಕೆಂಬ ಪ್ರಶ್ನೆ ಬಂದಾಗ, ಯಾರಿಗೆ ಕೊಡಬೇಕೆಂಬ ಪ್ರಶ್ನೆ ಬರುತ್ತದೆ. ಆದ್ದರಿಂದ ಲಾಟರಿ ಮೂಲಕ ಮಾಡಿದರೆ ಸೂಕ್ತವೆಂದು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ.

ಇನ್ನು ಎರಡನೆಯದಾಗಿ ನಗರ ಸಭೆಗಳೂ ಕೂಡ ನಗರಸಭೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆಮಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮಂತ್ರಿಗಳು ಹೇಳಿದರು, 94-95ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಕಟ್ಟಬೇಕಾದ ಮನೆಗಳಿಗೆ ಬೇಕಾದ ಬಜೆಟರಿ ಪ್ರೊವಿಷನನ್ನು ಪೂರ್ಣವಾಗಿ ಮಾಡಿಕೊಂಡಿರಲಿಲ್ಲ, ಆದರೆ ಇದಕ್ಕೂ ನಾವು ಹಣವನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಅದಕ್ಕೆ ಇನ್ನು ಎಷ್ಟು ಹಣ ಬೇಕು? ನೀವು ಈಗ ಎಷ್ಟು ಕೊಡುತ್ತೀರಿ? 95-96ನೇ ಸಾಲಿನಲ್ಲಿ 60 ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದೀರಿ. ಈಗಾಗಲೇ ಮಾರ್ಚ್ ಆದಮೇಲೆ 6 ತಿಂಗಳು ಕಳೆದುಹೋಯಿತು. 18.8.95ರಲ್ಲಿ ಆಜ್ಞೆಹೊರಡಿಸಿದ್ದೀರಿ. ಇದುವರೆಗೆ ನೀವು ಎಷ್ಟು ಹಣವನ್ನುಬಿಡುಗಡೆ ಮಾಡಿದ್ದೀರಿ? 60 ಸಾವಿರ ಮನೆಗಳ ಪೈಕಿ ಎಷ್ಟು ಮನೆಗಳ ಕೆಲಸ ಪ್ರಾರಂಭವಾಗಿದೆ? ಈ ವರ್ಷದ ಕೊನೆ ಅಂದರೆ, ಬರುವ ಮಾರ್ಚ್‌ಯೊಳಗೆ ಅಗತ್ಯವಾದ ಹಣವನ್ನು ಪೂರೈಸಲು ನೀವು ಬಜೆಟನಲ್ಲಿ ಪ್ರಾವಿಷನ್ ಮಾಡಿಕೊಂಡಿದ್ದೀರೋ?

ಶ್ರೀ ಬಸವರಾಜ ರಾಯರೆಡ್ಡಿ : ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಕಳೆದವರ್ಷ ಏನು ಆಜ್ಞೆ ಮಾಡಿದ್ದಾರೆ ಅದರ ಬಗ್ಗೆಹೇಳುತ್ತೇನೆ. ಅಲ್ಲಿ ಬಜೆಟರಿ ಪ್ರಾವಿಷನ್ ಮಾಡದೇ ಇದ್ದುದರಿಂದ ಅದನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಅದು ಪೇಪರ್ ಆರ್ಡರ್ ಅಷ್ಟೆ. ಕಳೆದ ವರ್ಷ ಆರ್ಡರ್ ಮಾಡಿದ್ದನ್ನು ಈ ವರ್ಷದ ಲೆಕ್ಕದಲ್ಲೇ ನಾವು ತೆಗೆದುಕೊಳ್ಳಬೇಕಾಗಿದೆ. ಹಣವೇ ಇಲ್ಲದಿದ್ದರೆ ನಾವೇನು ಮಾಡಬೇಕು? 1.50 ಲಕ್ಷ ಮನೆಗಳನ್ನು ಬೇರೆ ಬೇರೆ ರೂಪದಲ್ಲಿ ತೆಗೆದುಕೊಳ್ಳುತ್ತೇವೆ. ಆಶ್ರಯ ಅಡಿಯಲ್ಲಿ 60 ಸಾವಿರ, ಇಂದಿರಾ ಆವಾಜನಲ್ಲಿ 41 ಸಾವಿರ, ಅಂಬೇಡ್ಕರ್ ಯೋಜನೆ ಅಡಿಯಲ್ಲಿ 25 ಸಾವಿರ ಹೀಗೆ ಒಟ್ಟು 1.26 ಲಕ್ಷ ಮನೆಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಇದಕ್ಕೆ ಒಟ್ಟು 250 ಕೋಟಿ ಬೇಕಾಗುತ್ತದೆ ಮನೆಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಇದಕ್ಕೆ ಒಟ್ಟು 250 ಕೋಟಿ ಬೇಕಾಗುತ್ತದೆ. ಕಳೆದ ಸಾರಿ ಒಂದೊಂದು ಮನೆಗೆ 15 ಸಾವಿರ ರೂ. ಎಂದು ನಿಗದಿಮಾಡಿದ್ದನ್ನು ಹುಡ್ಕೋ ಮತ್ತಿತರ ಸಂಸ್ಥೆಗಳಿಂದ ತೆಗೆದುಕೊಳ್ಳುವುದಕ್ಕೆ ಪ್ರಾವಿಷನ್ ಮಾಡಿಕೊಂಡಿದ್ದೇವೆ. ಅಕ್ಟೋಬರ್ 2ನೇ ತಾರೀಖು ಅಂದರೆ ಗಾಂಧಿ ಜಯಂತಿಯಂದು ವರ್ಲ್ಡ ಹ್ಯಾಬಿಟ್ಯಾಟ್ ಡೇ ಅನ್ನು ಆಚರಣೆ ಮಾಡುತ್ತೇವೆ. ಅವತ್ತು ಆಶ್ರಯ ಮನೆಗಳ ಯೋಜನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯಾದ್ಯಂತ ಉದ್ಘಾಟನೆ ಮಾಡುತ್ತಾರೆ ಮತ್ತು ಎಲ್ಲಾ ಶಾಸಕರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸಭೆಗಳಲ್ಲಿ ಉದ್ಘಾಟನೆ ಮಾಡಬೇಕೆಂದು ಸರ್ಕಾರ ಈಗಾಗಲೇ ಆಜ್ಞೆಯನ್ನು ಹೊರಡಿಸಿದೆ.

ಶ್ರೀ ಚಂದ್ರಶೇಖರ ಎಂ. ಮಾಮನಿ : ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಗ್ರಾಮ ಸಭೆಗಳಲ್ಲಿ ಪಂಚಾಯಿತಿ ಸದಸ್ಯರು ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ಹೇಳಿದರು. ಇನ್ನೊಮ್ಮೆ ತಾಲ್ಲೂಕು ಪಂಚಾಯತಿಯಲ್ಲಿ ಮಾಡಬೇಕೆಂದು ಹೇಳಿದರು. ಮತ್ತೊಮ್ಮೆ ಹೇಳುವಾಗ ಲಾಟರಿ ಮುಖಾಂತರ ಮಾಡಬೇಕೆಂದು ಹೇಳಿದರು. ಗ್ರಾಮೀಣ ಪ್ರದೇಶದಲ್ಲಿ ಪಂಚಾಯತಿಯಿಂದ ಆರಿಸಿ ಹೋದಂಥ ಪಂಚಾಯಿತಿ ಸದಸ್ಯರು ತಾಲ್ಲೂಕು ಪಂಚಾಯಿತಿ ಸದಸ್ಯರು ನಾವೇ ಫಲಾನುಭವಿಗಳನ್ನು ಆಯ್ಕೆ ಮಾಡುತ್ತೇವೆ, ಲಾಟರಿ ಮುಖಾಂತರ ಬೇಡ ಎನ್ನುವಂಥ ಅಭಿಪ್ರಾಯ ಕೂಡ ಇಟ್ಟಿದ್ದಾರೆ .ಇದರಲ್ಲಿ ಸೂಕ್ತವಾದ ಯಾವ ನಿರ್ಧಾರವನ್ನು ಮಾನ್ಯ ಮಂತ್ರಿಗಳು ತೆಗೆದುಕೊಳ್ಳುತ್ತಾರೆಂಬುದನ್ನು ಕೇಳಬಯಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಇದರಲ್ಲಿ ಯಾವುದೇ ಕನಫ್ಯೂಷನ್ ಇಲ್ಲ ಗ್ರಾಮ ಸಭೆಗಳು, ಗ್ರಾಮ ಪಂಚಾಯಿತಿ ಸದಸ್ಯರು, ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಮುಖಾಂತರ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಾರೆ. ಇವರು ವಾರ್ಷಿಕ 11,800 ರೂ.ಗಳ ಆದಾಯ ಮಿತಿಯಲ್ಲಿ ಇದ್ದಾರೋ, ಇಲ್ಲವೋ, ಅವರಿಗೆ ಇರುವುದಕ್ಕೆ ಜಾಗ, ಮನೆ ಇದೆಯೋ ಇಲ್ಲವೋ ಎಂಬುದನ್ನು ಗುರ್ತಿಸುವುದು, ಗ್ರಾಮ ಸಭೆ ಮತ್ತು ಗ್ರಾಮ ಪಂಚಾಯಿತಿಯ ಸದಸ್ಯರು ಮತ್ತು ಅಧ್ಯಕ್ಷರು. ಆದರೆ ಒಟ್ಟು ಫಲಾನುಭವಿಗಳನ್ನು ಗುರ್ತಿಸಿದಮ್ಮೇಲೆ ನಿಗದಿತ ಸಂಖ್ಯೆಗಿಗಂತ ಕಡಿಮೆ ಮನೆ, ನಿವೇಶನಗಳನ್ನು ಕೊಟ್ಟಾಗ, ಲಾಟರಿ ಮುಖಾಂತರ ಮಾಡುವುದು ಸೂಕ್ತ ಎನಿಸುತ್ತದೆ. ಏಕೆಂದರೆ ಅಲ್ಲಿ ಯಾವುದೇ ವಿವಾದ ಬರುವುದಿಲ್ಲ. ಇವರು ಆ ಪಾರ್ಟಿಯವರಿಗೆ ಕೊಟ್ಟಿದ್ದಾರೆ, ಈ ಪಾರ್ಟಿಯವರಿಗೆ ಕೊಟ್ಟಿದ್ದಾರೆಂಬ ಮಾತು ಬರುವುದಿಲ್ಲ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಲಾಟರಿ ಮುಖಾಂತರ ಹಂಚಬೇಕೆಂದು ತೀರ್ಮಾನಿಸಿದ್ದೇವೆ.